**OS No. 34/2016**
**ಪಿ.ಡಬ್ಲ್ಯೂ: 1**

**ದಿನಾಂಕ 20-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ವಿ ಎ ವಕೀಲರಿಂದ ಃ**

ಸದರಿ ದಾವಾ ಆಸ್ತಿಯನ್ನು ನಾನು ಕರಾರು ಪತ್ರದ ಮೂಲಕ ಖರಿದಿ ಪಡೆದಿರುತ್ತೇನೆ. ನಾನು ಸದರಿ ಕರಾರು ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ನಾನು ಕರಾರು ಪತ್ರವನ್ನು ಗುರುತಿಸುತ್ತೇನೆ. ಸಾಕ್ಷಿಯು ನಿಪಿ-1 ನ್ನು ನೋಡಿ ಸದರಿ ಕರಾರು ಪತ್ರ ಅದೇ ಎಂದು ಗುರುತಿಸುತ್ತಾರೆ. ಸದರಿ ನಾನು ನಿಪಿ-1 ರ ಆಧಾರದ ಮೇಲೆ ಪ್ರತಿವಾದಿಯರ ವಿರುದ್ದ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ನಾನು ಇದೇ ನ್ಯಾಯಾಲಯದಲ್ಲಿ ನಾನೇ ಮಾಲೀಕ ಎಂದು ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ನಾನು ಮುಂಚೆ ಮಾಡಿರುವ ದಾವೆಯಲ್ಲಿ ನಾನೇ ಮಾಲೀಕ ಎಂದು ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರತಿವಾದಿಯರು ಆ ಡಿಕ್ರಿಯ ವಿರುದ್ದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯು ಪ್ರತಿವಾದಿಯರ ಪರ ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಪ್ರತಿವಾದಿಯರು ಮಾಲೀಕರು ಆಗಿರುತ್ತಾರೆ ಎಂದರೆ ಸಾಕ್ಷಿಯು ನಾನು ಎರಡನೇ ಮೇಲ್ಮನವಿಯನ್ನು ಮಾನ್ಯ ಉಚ್ಚ ನ್ಯಾಯಾಲಯ ಕಲಬುರ್ಗಿ ಪೀಠಕ್ಕೆ ಸಲ್ಲಿಸಿರುತ್ತೇನೆ. ಸದರಿ ಎರಡನೇ ಮೇಲ್ಮನವಿಯನ್ನು ವಾಪಸ ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಕಿರಿಯ ನ್ಯಾಯಾಲಯದಲ್ಲಿ ಹಕ್ಕುಗಳನ್ನು ಮರಳಿ ಪ್ರಸ್ತಾಪಿಸಲು ಹೇಳಿರುತ್ತಾರೆ. ಸದರಿ ಇದೇ ನ್ಯಾಯಾಲಯದಲ್ಲಿ ನಾನು ಯಾವತ್ತೂ ಖರಿದಿ ಕರಾರು ಪತ್ರ ಎಂದು ಹೇಳಿಲ್ಲ ಎಂದರೆ ಸರಿ. ಸದರಿ ಪ್ರತಿವಾದಿಯರು ನನಗೆ ಸನಃ 1999 ರಲ್ಲಿ ಖರಿದಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಮೊಟ್ಟ ಮೊದಲನೇ ಬಾರಿ ಮಾಡಿದಂತಹ ಖರಿದಿ ಕರಾರು ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ಮಾಹಿತಿ ಇತ್ತು.

**ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**